

ನಿಸರ್ಗದ ಭಾಗವೇನೋ ಎನ್ನುವಂತೆ ಮೈದಳೆದಿರುವ ಸುಂದರ ಮಂದಿರ

ಕಾಣುವುದೇ ಬಹು ಮೋಹಕ ದೃಶ್ಯ. ಅನೇಕರು ಹನಿಮೂನ್‌ಗೆಂದು ಬರುವುದಿದೆ.

ಇಲ್ಲಿನ ಸೂರ್ಯಾಸ್ತ ಬಹಳ ಪ್ರಖ್ಯಾತ. ಕಡಲು ಕೊರೆತದಿಂದ ಇಬ್ಭಾಗವಾಗಿ ಮುಂಚಾಚಿಕೊಂಡಿರುವ ಬಂಡೆಯ ನಡುವೆಯೇ ಕಡಲನ್ನು ಬಳಸಿ ಭವ್ಯವಾಗಿ ವಿಸ್ತರಿಸಿಕೊಂಡಿರುವ ದೇಗುಲ. ಸಮುದ್ರದಲೆಗಳಲ್ಲಿ ಜಾಗರೂಕರಾಗಿ ಹೆಜ್ಜೆಯಿಟ್ಟು ನೀರಿನ ನಡುವಿನ ದೇಗುಲಕ್ಕೆ ಬರಬೇಕು. ಅನೇಕರು ಹುಚ್ಚೆದ್ದು ಕುಣಿವ ಬೃಹದಾಕಾರದ ಅಲೆಗಳನ್ನು ಕಾಣುವುದಕ್ಕಾಗಿಯೇ ಇಲ್ಲಿಗೆ ಬರುತ್ತಾರೆ.

## ಪುರ ಲುಹರ್ ಉಲುವಾಟು

ಲೆಂಪ್ಯುಯಾಂಗ್‌ಯನ್ನು ಸ್ವರ್ಗದ ಹೆಬ್ಬಾಗಿಲು ಎಂದರೆ, ಉಲುವಾಟು 'ಸ್ವರ್ಗದ ಬಾಗಿಲು' ಎಂಬ ಹೆಗ್ಗಳಿಕೆ. ಬಾಲಿನೀಸ್ ಭಾಷೆಯಲ್ಲಿ 'ಉಲು' ಎಂದರೆ ತುತ್ತತುದಿ, 'ವಾಟು' ಅಂದರೆ ಬಂಡೆ. ಕಡಿದಾದ ಬಂಡೆಯ ಮೇಲಿರುವ ಪುರಾತನ ದೇವಸ್ಥಾನವಿದು. 9ನೇ ಶತಮಾನದಲ್ಲಿದ್ದ ದ್ಯಾಂಗ್ ಹ್ಯಾಂಗ್ ನಿರರ್ಥನ ಹೆಸರು ಈ ದೇಗುಲದ ನಿರ್ಮಾಣಕ್ಕೂ ತಳಕು ಹಾಕಿಕೊಂಡಿದೆ. ಸಮುದ್ರ ಮಟ್ಟದಿಂದ ಸುಮಾರು 230 ಅಡಿ ಎತ್ತರದಲ್ಲಿ ಮುಂಚಾಚಿಕೊಂಡಿರುವ ಕಡುಬಂಡೆ ಮೇಲೆ ಈ ಬೃಹತ್ ದೇವಸ್ಥಾನದ ಸಮುಚ್ಚಯವಿದ್ದು, ದ್ವೀಪಕ್ಕೆ ಕಾವಲಾಗಿ ಅತಿ ಎತ್ತರದ ಬಂಡೆ ಮೇಲೆ ಸ್ಥಾಪಿಸಿದನೆಂಬುದು ಪ್ರತೀತಿ. ಬೆಟ್ಟದ ತುದಿಯಲ್ಲಿ ಪವಿತ್ರ ಪದ್ಮಾಸನ ಗುಡಿ ಕಟ್ಟಿ, ನಿರರ್ಥ ಮೋಕ್ಷ ಹೊಂದಿದನೆಂಬುದು ಸ್ಥಳ ಪುರಾಣ.

ಉಲುವಾಟು ದೇಗುಲದಲ್ಲಂತೂ ವಾನರ ಸೇನೆಗಳ ಉಪಟಳ ವಿಪರೀತ. ಅವುಗಳಿಂದ ಪಾರಾಗಿ ಪ್ರವೇಶದ್ವಾರಕ್ಕೆ ಬಂದರೆ ಎದುರಿಗೇ ಪ್ರಶಾಂತ ಸಮುದ್ರ ಮತ್ತು ಅನತಿ ದೂರದಲ್ಲಿ ಅಗಾಧವಾಗಿ ನಿಂತಿರುವ ಕುಂಭಕರ್ಣ! ಕುಂಭಕರ್ಣ ರಾಕ್ಷಸನಾದರೂ ಸನ್ನಡತೆಯುಳ್ಳ ಪರಾಕ್ರಮಿ. ಹೊರಗಿನ ಆಕ್ರಮಣಕಾರಿ ದುಷ್ಟ ಶಕ್ತಿ ವಿರುದ್ಧ ಹೋರಾಡಿ ಪುಟ್ಟ ದ್ವೀಪವನ್ನು ರಕ್ಷಿಸುತ್ತಿರುವವನಾದ್ದರಿಂದ ವಿಶೇಷ ಮರ್ಯಾದೆ. ಪುರಾಣದಲ್ಲೆಲ್ಲೂ ಅಂತಹ ಮಹತ್ವದ ಪಾತ್ರ ವಹಿಸದ ಕುಂಭಕರ್ಣ ಮಹಾನ್ ನಾಯಕನಾಗಿ ಊರ ಕಾಯುವ ದಳಪತಿಯಾಗಿ ಕಾಣುವುದು ಇಲ್ಲಷ್ಟೇ ಸಾಧ್ಯವೇನೋ!

ಬಾಲಿಯಲ್ಲಿ ಪುರಾಣದ ವಿಶಿಷ್ಟ ಪಾತ್ರಗಳೆಲ್ಲಾ ಪ್ರತಿಮೆಗಳಾಗಿ ಅರಳಿರುವುದನ್ನು ಕಾಣಬಹುದು. ವಿಮಾನ ನಿಲ್ದಾಣದಲ್ಲಿಳಿದು ಡೆನ್‌ಪಸಾರ್‌ನಿಂದ ನಗರಕ್ಕೆ ಪ್ರವೇಶ ಪಡೆದುಕೊಳ್ಳುತ್ತಿದ್ದಂತೆ ಗದೆ ಹಿಡಿದು ರಥದ ಮೇಲಿರುವ ಘಟೋತ್ಕಚ, ಬಿಲ್ಲೇರಿಸಿ ರಥದಲ್ಲಿ ಕುಳಿತಿರುವ ಕರ್ಣನ 'ಪತುಂಗ್ ಸತ್ರಿಯ ಘಟೋತ್ಕಚ' ಸುರಸುಂದರ ಬೃಹತ್ ಪ್ರತಿಮೆಯೊಂದು ನಮ್ಮನ್ನು ಎದುರುಗೊಳ್ಳುತ್ತದೆ. ಹಿಂದೂ ಪುರಾಣಗಳಲ್ಲಿ ತೀರಾ ನಗಣ್ಯರೆನ್ನುವಂತಹ ಪಾತ್ರಗಳೆಲ್ಲಾ ಗಣನೀಯ ಸ್ಥಾನಗಳಲ್ಲಿ ಅಲಂಕೃತಗೊಂಡಿವೆ. ಸೀತೆ ಬಹು ಚರ್ಚಿತ ಪಾತ್ರವಾದರೂ ಪ್ರತ್ಯೇಕ ಗುಡಿ ಕಟ್ಟಿ ಪೂಜಿಸಿದ್ದಾಗಲಿ, ಬೃಹತ್ ಪ್ರತಿಮೆ ಕಡೆದು ರಸ್ತೆಯಲ್ಲಿ ಮೆರೆದದ್ದಾಗಲಿ ಭಾರತದಲ್ಲಿ ಕಾಣಲು ಸಾಧ್ಯವಿಲ್ಲ. ಬಾಲಿಯಲ್ಲಿ ಕುಂತಿ, ದ್ರೌಪತಿ, ಸೀತೆಯರ ಎತ್ತರದ ಪ್ರತಿಮೆಗಳನ್ನು ರಸ್ತೆ ಮಧ್ಯೆ ನಿಲ್ಲಿಸಿರುವುದು ಕಂಡಾಗ ಆಶ್ಚರ್ಯವಾಗುತ್ತೆ. ಮಹಾಭಾರತದ ನಗಣ್ಯ ಪಾತ್ರಗಳಾದ ನಕುಲ, ಸಹದೇವರೂ ಅಪರೂಪದ ಪ್ರತಿಮೆಗಳಾಗಿದ್ದಾರೆ.

## ಅಗ್ನಿ ಪರ್ವತ ಮತ್ತು ಸೂರ್ಯಾಸ್ತ

ಮೌಂಟ್ ಬಟುರ್ ಅಗ್ನಿಪರ್ವತ, ಸೂರ್ಯಾಸ್ತ ನೋಡಲು ಬೆಳಗ್ಗೆ ಮೂರು ಗಂಟೆಗೇ ಹೊರಡಬೇಕು.



ಉಬುಡ್‌ನಲ್ಲಿನ ಶಾರದೆಯ ಮಂದಿರ

ಸಮಯಕ್ಕೆ ಸರಿಯಾಗಿ ಜೀಪ್ ತೆಗೆದುಕೊಂಡು ಬಂದವನು ಇಪ್ಪತ್ತೆರಡರ ಪ್ರಾಯದ ಹುಡುಗ 'ಪುಟು'. ನಮ್ಮನ್ನು 'ಅಮ್ಮ, ಅಪ್ಪಾ' ಎಂದೇ ಸಂಬೋಧಿಸುತ್ತಿದ್ದ. ಆಗಷ್ಟೇ ಹೋಟೆಲ್ ಮ್ಯಾನೇಜ್‌ಮೆಂಟ್ ಮುಗಿಸಿ, ಬಾಲಿಯಲ್ಲೊಂದು ಹೋಟೆಲ್ ತೆಗೆಯುವ ಯೋಜನೆ. ಅವನ ಪ್ರಕಾರ, ಇಡೀ ಇಂಡೊನೇಷ್ಯಾದಲ್ಲೇ ಉದ್ಯೋಗ ಅವಕಾಶವಿಲ್ಲವಾದ್ದರಿಂದ, ಬಾಲಿಯಲ್ಲಿ ಪ್ರವಾಸಿಗರಿಗೆ ಟ್ಯಾಕ್ಸಿ ಓಡಿಸೋದು ಮತ್ತು ಹೋಟೆಲ್ ಉದ್ಯಮ ಸದ್ಯಕ್ಕೆ ದುಡ್ಡು ತರುವ ಕಾಯಕವೆಂದು ವಿವರಣೆ ಕೊಟ್ಟ.

ಸನ್ನುರ್‌ನಿಂದ ಮೌಂಟ್ ಬಟುರ್‌ಗೆ 66 ಕಿಲೋ ಮೀಟರ್. ಪರ್ವತದ ತಪ್ಪಲು ತಲುಪಲು ಎರಡು ಗಂಟೆ ಪ್ರಯಾಣಿಸಬೇಕು. ಸಾಮಾನ್ಯವಾಗಿ ಸೂರ್ಯೋದಯ ನೋಡಲು ಟ್ರೆಕ್ಕಿಂಗ್ ಮಾಡಿಕೊಂಡು ಬರುವವರೇ ಜಾಸ್ತಿ. ದಾರಿಯಿಲ್ಲದ ಬೆಟ್ಟದ ಮೇಲೆ, ಪ್ರಪಾತದ ದರ್ಶನ ನೀಡುತ್ತಾ ಜೀಪ್ ಆ ಕಡೆ, ಈ ಕಡೆ ವಾಲಿ, ಕುಲುಕುತ್ತಾ ಮುಂದೆ ಸಾಗುತ್ತಿದ್ದರೆ ಇಡೀ ಮೈ ನುಚ್ಚುನೂರಾದ ಅನುಭವ.

ಚುಮು ಚುಮು ಬೆಳಗಿನಲ್ಲಿ ಬಟುರ್ ಪರ್ವತವೇರಿ ಮೋಡದ ಮರೆಯಲ್ಲಿ ರಾಜ ಗಾಂಭೀರ್ಯದಿಂದ ತಲೆಯೆತ್ತಿ ನಿಂತಿರುವ ಅಗುಂಗ್ ಪರ್ವತ ನೋಡುವುದೇ ಸೊಬಗು. ಅನತಿ ದೂರದ ಅಗುಂಗ್ ಪರ್ವತದಲ್ಲಿ ಬಾಲ ರವಿ ಉದಯಿಸುತ್ತಿದ್ದಂತೇ ಬಟುರ್ ತಪ್ಪಲಲ್ಲಿರುವ ಸರೋವರದಲ್ಲಿ ಸೂರ್ಯ ಕಿರಣಗಳು ಸ್ಪರ್ಶಿಸಿ ಕೈಯಾಡಿಸುತ್ತಿದ್ದಂತೆ ಹೊಂಬಣ್ಣದಲ್ಲಿ ಮಿನುಗುವ ನೀರು, ಸುತ್ತುವರಿದ ದಟ್ಟ ಬೆಟ್ಟಗಳ ಸಾಲು, ಎದುರಿನ ನೀರುಳ್ಳಿ ಗದ್ದೆಗಳು, ಬೀಸುವ ಶುಭ್ರ ರುಮು ರುಮು ಗಾಳಿ – ವರ್ಣನಾತೀತ ಅನುಭವ!

ಪುಟು ಬಾಲಿಯ ಸಮಸ್ಯೆಗಳನ್ನು ಕುರಿತು ಉದ್ದಕ್ಕೂ ಮಾತನಾಡುತ್ತಲಿದ್ದ. ಸದ್ಯಕ್ಕೆ ಶೇ. 80 ಹಿಂದೂಗಳಿರುವ ಬಾಲಿ, ಮುಂದೆಯೂ ಹಿಂದೂ ದ್ವೀಪವಾಗುಳಿಯುತ್ತದೆಂದು ಹೇಳಲಾಗದ ಪರಿಸ್ಥಿತಿ. ಹತ್ತು ವರುಷದ ನಂತರ ಬಾಲಿ ಹೇಗಿರುತ್ತದೆಂದರೆ ಎಲ್ಲವೂ ಅಯೋಮಯ. ಇದುವರೆಗೂ ನಂಬಿ, ಅನುಸರಿಸುತ್ತಿರುವ ಧರ್ಮ, ಪ್ರಾಚೀನ ದೇಗುಲಗಳು, ಪುರಾತನ ಸಂಪ್ರದಾಯಗಳು ಒಂದೊಂದೇ ನಶಿಸಿ ಹೋಗುತ್ತಿವೆ...

ಸ್ವಗತದಂತೆ ಸಾಗುತ್ತಿದ್ದ ಅಂತರಾಳದ ಮಾತುಗಳು! ಬಾಲಿ ಕೇವಲ ಒಂದು ದ್ವೀಪವಾಗದೆ ಅಖಂಡವಾಗಿ ನನ್ನೊಳಗಿಳಿದ ಅನುಭವ. 'ಮತ್ತೆ ಬಾಲಿಗೆ ಬನ್ನಿ!' ಎಂದು ಅವನೇನೋ ಬೀಳ್ಕೊಟ್ಟ. ಬೆಳಿಗ್ಗೆ ಬೆಂಗಳೂರಿಗೆ ಹೊರಡುವಾಗಲೂ ಅದೇ ದುಗುಡ! 'ಆರದಿರಲಿ ಸಾವಿರ ದೇಗುಲಗಳ ನಂದಾದೀಪ!' ಎಂದುಕೊಂಡು ಕಟ್ಟಕಡೆಗೊಮ್ಮೆ ಬಾಲಿಯನ್ನು ಮತ್ತೊಮ್ಮೆ ಕಣ್ತುಂಬಿಕೊಂಡು ವಿಮಾನವೇರಿದೆ.